MYSORE LEGISLATIVE ASSEMBLY

EIGHTH DAY.

Tuesday, 19th October 1954.

The House met in the Assembly Hall, Old Public Offices, Bangalore, at Thirty Minutes past Eight of the Clock.

MR. SPEAKER (SRI H. S. RUDRAPPA, B.SC., LL. B.) in the Chair.

QUESTIONS AND ANSWERS.

Agricultural College.

Q.—211. Sri K. V. BYRE GOWDA (Bangalore North).—

Will the Government be pleased to state :—

(*a*) whether they have thought of providing pakka buildings for the Agricultural College ;

(*b*) whether they know that the present sheds for running classes, etc., were built as a temporary measure ;

(*c*) whether they have been thinking of shifting the Agricultural College from Hebbal to any other place ;

(*d*) How many times the Minister concerned has inspected the buildings and farms ;

(*e*) what his suggestions were for improving the Agricultural College ;

(*f*) how far they have been carried out ;

(*g*) how many pairs of bullocks there are to give the students practical training, etc ;

(*h*) whether there is a dairy farm attached to the College ;

(*i*) the extent of land attached to the College for giving practical lessons;

(*j*) whether there is adequate staff employed to cope with the teaching work for the present strength of students ?

A.—Dr. R. NAGAN GOWDA (Minister for Agriculture).—

(*a*) Yes.

(*b*) Yes.

(*c*) This question has already been fully examined by a Special Committee appointed by Government and on its recommendation, it has been ordered by Government in their Order No. A.F. 2234—Agri. 255-50-2, dated 5th June 1951, that the Agricultural College may continue at Hebbal as hitherto.

(*d*), (*e*) and (*f*) It is difficult to furnish the details in the absence of specific reference to the period covered by the question.

(*g*) Five pairs of bullocks.

(*h*) No.

(*i*) The area of the Farm attached to the College is as follows :—

(1) Dry land ... 140 acres.
(2) Wet land ... 20 acres.

(*j*) No. The question of providing additional staff is under consideration of Government.

ಶ್ರೀ ಕೆ. ವಿ. ಬೈರೇಗೌಡ.—ನನ್ನ ಪ್ರಶ್ನೆಯ (*b*) ಭಾಗದಲ್ಲಿ ಕೇಳಿರುವುದಕ್ಕೆ ಗೊತ್ತಿದೆ ಎಂದು ಉತ್ತರ ಕೊಟ್ಟಿದ್ದೀರಿ. ಈಗ ಅದರ ಪರಿಸ್ಥಿತಿ ಏನಾಗಿದೆ ಎಂಬುದನ್ನು ಹೇಳುತ್ತೀರಾ, ಸ್ವಾಮಿ ?

ಡಾ॥ ಆರ್. ನಾಗನಗೌಡ.—ಅವು ಇನ್ನೂ ಟೆಂಪೊರರಿ ಆಗಿಯೇ ಇವೆ. ಪರ್ಮನೆಂಟ್ ಆಗಿಲ್ಲ.

ಶ್ರೀ ಕೆ. ವಿ. ಬೈರೇಗೌಡ.—(*d*) ಪ್ರಶ್ನೆಯಲ್ಲಿ ಸಂಬಂಧಪಟ್ಟ ಸಚಿವರು ಎಷ್ಟು ಸಲ ಕಟ್ಟಡಗಳನ್ನು ಮತ್ತು ವ್ಯವಸಾಯ ಕ್ಷೇತ್ರಗಳನ್ನು ಅಜಮಾಯಿಷಿ ಮಾಡಿದರು ಎಂದು ಕೇಳಿರುವುದಕ್ಕೆ ಸರಿಯಾದ ಉತ್ತರ ಕೊಟ್ಟಿಲ್ಲ. ಅದನ್ನು ತಿಳಿಸುತ್ತೀರಾ, ಸ್ವಾಮಿ ?

ಡಾ॥ ಆರ್. ನಾಗನಗೌಡ.—ಅದು ಯಾವ ಪೀರಿಯಡ್‌ನಲ್ಲಿ ಎಂದು ನಿರ್ದಿಷ್ಟವಾಗಿ ಹೇಳಿಲ್ಲ, ಆದಕಾರಣ ಉತ್ತರ ಕೊಡಲಾಗಲಿಲ್ಲ. ನಾನು ನಾಲ್ಕೈದು ಸಾರಿ ಹೋಗಿದ್ದೇನೆ. ಹೋಗಿದ್ದಾಗ ಅವರಿಗೆ ಕೆಲವು ವಿಚಾರಗಳನ್ನು ಹೇಳಿದ್ದೇನೆ.

ಶ್ರೀ ಕೆ. ವಿ. ಬೈರೇಗೌಡ.—ಬಿಲ್ಡಿಂಗ್, ಲ್ಯಾಬೊರೇಟರಿ ಮತ್ತು ಸ್ಟಾಫ್ ಈ ಮೂರು ವಿಷಯಗಳ ಬಗ್ಗೆ ಏನು ಹೇಳಿದ್ದೀರಿ, ಸ್ವಾಮಿ ?

ಡಾ॥ ಆರ್. ನಾಗನಗೌಡ.—ಬಿಲ್ಡಿಂಗ್ ವಿಷಯ ತಿಳಿದಿದೆ. ಜಾಗ ಕಮ್ಮಿ ಇದೆ. ಅದು ನಿಜವಾದ ಮಾತು. ಅದನ್ನು ನಿವಾರಣೆ ಮಾಡುವುದಕ್ಕೆ ಇಷ್ಟರೊಳಗೇ ಪ್ರಯತ್ನ ಮಾಡುತ್ತಾರೆ. ಮತ್ತು ಸ್ಟಾಫ್ ವಿಷಯ ತಾವು ತಮ್ಮ ಪ್ರಶ್ನೆಯ ಕೊನೆಯ ಭಾಗದಲ್ಲಿ ಕೇಳಿದ್ದೀರಿ. ಅದು ಇನ್ನೂ ಸ್ಯಾಂಕ್ಷನ್ ಆಗಿಲ್ಲ. ಇಷ್ಟು

(ಡಾ॥ ಆರ್. ನಾಗನಗೌಡ.)

ದಿವಸ 58 ಮಂದಿ ವಿದ್ಯಾರ್ಥಿಗಳಿದ್ದರು, ಈಗ 80 ಮಂದಿ ಇದ್ದಾರೆ. First yearನಲ್ಲಿ ಎಷ್ಟು ಸ್ಯಾಷ್ ಬೇಕೋ ಅಷ್ಟು ಕೊಟ್ಟಿದ್ದಾರೆ.

ಶ್ರೀ ಕೆ. ಪಿ. ಬೈರೇಗೌಡ.—ಈ ಕಾಲೇಜಿಗೆ ಪ್ರತ್ಯೇಕವಾದ ಡೈರಿಯ ಅವಶ್ಯಕತೆ ಇಲ್ಲವೇ ?

ಡಾ॥ ಆರ್. ನಾಗನಗೌಡ.—ಈಗ ಸದ್ಯಕ್ಕೆ ಏನೇನು ಬೇಕೋ ಅದನ್ನೆಲ್ಲಾ ಕೊಡುವುದಕ್ಕೆ ಏರ್ಪಾಡುಮಾಡಿದ್ದೇವೆ.

ಶ್ರೀ ಕೆ. ಪಿ. ಬೈರೇಗೌಡ.—ಪ್ರತ್ಯೇಕವಾದ ಡೈರಿ ಇಲ್ಲದೆ ಕ್ಲಾಸನ್ ನಡೆಸುವುದಕ್ಕೆ ಸಾಧ್ಯವೇ ?

ಡಾ॥ ಆರ್. ನಾಗನಗೌಡ.—ಈ ಕಾಲೇಜಿಗೆ ಪಕ್ಕದಲ್ಲಿರುವ ಕೆರೆಯ ಆಚೆಕಡೆ ಇಂಪೀರಿಯಲ್ ಡೈರಿ ಇದೆ. ಅಲ್ಲಿಗೆ ಹೋಗಿ ಸ್ವಡಿ ಮಾಡುತ್ತಾರೆ. ಸಾಧ್ಯವಾದಲ್ಲಿ ಇಲ್ಲೇ ಒಂದು ಡೈರಿ ಏರ್ಪಾಡು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಅಗ್ರಿಕಲ್ಚರಲ್ ಕಾಲೇಜು ಮತ್ತು ಸ್ಕೂಲು ಎರಡೂ ಒಂದೇ ಕಡೆ ಇದೆ ಅಲ್ಲವೇ ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ವಿದ್ಯಾರ್ಥಿಗಳಿಗೆ ತಾವು ಕೊಟ್ಟಿರುವುದು 140 ಎಕರೆ ಖುಷ್ಕಿ, 20 ಎಕರೆ ತರೀ ಜಮೀನು ಎಂದುಹೇಳುತ್ತೀರಿ. Practical classಗೆ ಇದು ಸಾಕಾಗುತ್ತದೆಯೇ ?

ಡಾ॥ ಆರ್. ನಾಗನಗೌಡ.—Practical class ಎಂದರೆ ಏನು ಎಂಬುದು ತಮಗೇ ಗೊತ್ತಿದೆ. Practical class ವಿಷಯ ಹೇಳುವ ಅವಶ್ಯಕತೆ ಇಲ್ಲ. ಇದರೊಳಗೆ ಇನ್ನೊಂದು ಪ್ರಶ್ನೆ ಇದೆ. ಹುಡುಗರಿಗೆ Practical Training ಕೊಡಲು ಎಷ್ಟು ಜೊತೆ ಎತ್ತುಗಳಿವೆ ಎಂದು ಕೇಳಿದ್ದಾರೆ. ಹುಡುಗರನ್ನು ಕರೆದುಕೊಂಡುಹೋಗಿ, ನೋಡಿ, ಎತ್ತು ಹೀಗೆ ಕಟ್ಟಬೇಕು, ನೇಗಿಲು ಹೀಗೆ ಹಿಡಿಯಬೇಕು ಎಂದು ಹೇಳಿ ಅದನ್ನೆಲ್ಲಾ ಅಲ್ಲಿ ಕಲಸಬಾರದು ಎಂದು ನನ್ನ ಅಭಿಪ್ರಾಯ. ರಜಾ ದಿನದಲ್ಲಿ ಮನೆಯಲ್ಲಿ ಇದ್ದಾಗ ಅವನ್ನೆಲ್ಲಾ ಕಲಿತುಕೊಂಡು ಬರಬೇಕು. Practical ಆಗಿ ಅವನ್ನೆಲ್ಲಾ ನಾವು ಕಲಿಸಿಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಯಾವ ಯಾವ ಭಾಗದಲ್ಲಿ ಯಾವ ಯಾವ ಆಹಾರ ಧಾನ್ಯ ಬೆಳೆಯುತ್ತದೆ, ಅವುಗಳನ್ನು ಬೆಳೆಯುವ ವಿಧಾನ ಹೇಗೆ ಎಂಬುದನ್ನು ಹೇಳಿಕೊಡುವುದಕ್ಕೆ ತಾವು ಕೊಟ್ಟಿರತಕ್ಕ 20 ಎಕರೆ ತರಿ, 140 ಎಕರೆ ಖುಷ್ಕಿ ಜಮೀನು ಸಾಕೇ ?

ಡಾ॥ ಆರ್. ನಾಗನಗೌಡ.—ಚಾಮರಾಜನಗರದ ಹತ್ತಿರ ಒಂದು ಫಾರಂ ಇದೆ, ಬಬ್ಬೂರಿನ ಹತ್ತಿರ ಒಂದು ಫಾರಂ ಇದೆ. ವಿಶ್ವೇಶ್ವರಯ್ಯ ಕೆನಾಲ್‌ನ ಹತ್ತಿರ ಮಂಡ್ಯದಲ್ಲಿ ಒಂದು ಫಾರಂ ಇದೆ. ಈ ಎಲ್ಲಾ ಕಡೆಗಳಲ್ಲೂ ನಾನಾ ವಿಧವಾದ ಪ್ರಯೋಗಗಳು ಈಗಾಗಲೇ ನಡೆಯುತ್ತಾ ಇವೆ. ಇದೊಂದೇ ಫಾರಂನಲ್ಲಿ ಎಲ್ಲವನ್ನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದೂ ಅಲ್ಲದೆ ಬೇರೆ ಬೇರೆ ಕಡೆ ಬೇರೆ ಬೇರೆ ರೀತಿ ಭೂಮಿ ಇರುತ್ತದೆ. ಆದ್ದರಿಂದ ಎಲ್ಲಾ ಕಡೆಗಳಿಗೂ ಕಳುಹಿಸುವುದರಿಂದ ಆಯಾ ಫಾರಂನಲ್ಲಿ ಆಗತಕ್ಕ ಪ್ರಯೋಗಗಳ ಅನುಭವ ಬರುತ್ತದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಆ ಫಾರಂಗಳಲ್ಲಿ ಆಹಾರ ಧಾನ್ಯಗಳನ್ನೆಲ್ಲಾ ಬೆಳೆಯುತ್ತಿದ್ದೀರಾ ?

ಡಾ॥ ಆರ್. ನಾಗನಗೌಡ.—ಆ ಫಾರಂಗಳಲ್ಲಿ ಅವರಿಗೆ ಇರುವಷ್ಟು ಭೂಮಿಯಲ್ಲಿ ಏನೇನು ಬೆಳೆಯುವುದಕ್ಕೆ ಸಾಧ್ಯವೋ ಅದನ್ನೆಲ್ಲಾ ಬೆಳೆಯುವುದಕ್ಕೆ ಪ್ರಯತ್ನಮಾಡಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ತಾವು ಈ ವ್ಯವಸಾಯದ ಕ್ಷೇತ್ರಗಳ ವಿಸ್ತೀರ್ಣ ಬಹಳ ಹಿಂದಿನಿಂದಲೂ ಎಷ್ಟಿತ್ತೋ ಅಷ್ಟೇ ಈಗಲೂ ಇದೆ ಎಂದು ಹೇಳಿದರೆ ಒಪ್ಪಿಕೊಳ್ಳುತ್ತೀರಾ ?

ಡಾ॥ ಆರ್. ನಾಗನಗೌಡ.—ಹೆಚ್ಚಾಗಿದಲ್ಲಿ ಒಂದಿಷ್ಟು ಇದೆ. ಅದೇ ರೀತಿ ಇನ್ನೂ ಕೆಲವು ಕಡೆ ಇದೆ. ಅವುಗಳನ್ನೆಲ್ಲಾ ತಾವು ನೋಡಬೇಕು.

ಶ್ರೀ ಎಸ್. ಸಿದ್ದಪ್ಪ.—ಇಲ್ಲಿರತಕ್ಕ 130 ಜನ ವಿದ್ಯಾರ್ಥಿಗಳಿಗೆ ಬೇಕಾದ ಒಂದು ಸೌಕರ್ಯ, ವಿದ್ಯಾಭ್ಯಾಸದ ವ್ಯವಸ್ಥೆ ಇಲ್ಲದೇ ಇದ್ದಮೇಲೆ, ಅದರಲ್ಲೂ ವ್ಯವಸಾಯಕ್ಕಾಗಿ ಪ್ರಜಾ ಸರ್ಕಾರ ಬಂದಮೇಲೆ ಹೆಚ್ಚು ಅನುಕೂಲ ಒದಗಿಸಿಕೊಡುತ್ತೇವೆ ಎಂದು ಹೇಳುತ್ತಿದ್ದೂ ಸಹ, ತಕ್ಕ ಏರ್ಪಾಡುಮಾಡದೇ ಇರುವುದು ಸರಿಯೇ ?

ಡಾ॥ ಆರ್. ನಾಗನಗೌಡ.—ತಾವು ಹೇಳುವುದು ನಿಜ. ನಮ್ಮ ಕಾಲೇಜು, ಸ್ಕೂಲು ಎಲ್ಲವನ್ನೂ ಇನ್ನೂ ಸ್ವಲ್ಪ ದೊಡ್ಡದಾಗಿ ಮಾಡುವುದಕ್ಕೆ ಎಲ್ಲಾ ವಿಧವಾದ ಪ್ರಯತ್ನಗಳನ್ನೂ ಮಾಡುತ್ತೇವೆ.

Sri K. PUTTASWAMY.—Sir, I want to know whether the Government were not thinking of shifting the College after they received the report dated 5th June 1951.

Dr. R. NAGAN GOWDA.—Well, that question has been under consideration of the Government. The Visitors' Committee has also sent a report regarding the unsuitability of the present farm and the question of selecting some other site at the V. C. Farm at Mandya is engaging attention. The question has not been finally settled. For the present, we have been continuing in the same place.

Sri K. PUTTASWAMY.—Sir, what is the difficulty in taking a definite step in this direction ?

Dr. R. NAGAN GOWDA.—Not much, except finances.

Sri K. PUTTASWAMY.—If the Government is earnest about running this college, is it not necessary that they should take the required steps to provide finances, Sir ?

Dr. R. NAGAN GOWDA.—Yes, that matter is under the consideration of the Government now.

Sri R. ANANTARAMAN.—Are you aware that the Agricultural College has requested the Government for the appointment of additional staff ?

Dr. R. NAGAN GOWDA.—Yes, they have asked for additional staff and we have recently sanctioned some of the staff that has been requested.